ಚಿತ್ರದುರ್ಗ ಡಿಸ್ಟ್ರಿಕ್ಟ್.

ತಾರೀಖು 17ನೇ ಡಿಸೆಂಬರ್ 1902.

ತಾರೀಖು 13ನೇ ಡಿಸೆಂಬರ್ 1902ನೇ ರಾತ್ರಿ ಹೊಳಲ್ಕೆರೆ ತಾಲ್ಲೂಕು ಲಾಕಪ್ಪಿನಿಂದ ಫರಾರಿ ಆದ ಖೈದಿ ಮುರಿಗೆಪ್ಪನ ಚಹರೆ ತಪಶೀಲ್.

ಹೆಸರು—ಕುಕ್ಕೆ ಮುರಿಗೆಪ್ಪ; ವಯಸ್ಸು—25 ವರುಷಗಳು, ಜಾತಿ—ಸಾದು ಲಿಂಗಾಯಿತ, ತಂದೆ ಹೆಸರು—ಕುಕ್ಕೆ ಸಂಕಪ್ಪ, ಕಸಬು—ಜಿರಾಯಿತು, ವಾಸಸ್ಥಳ—ಹೊಳಲ್ಕೆರೆ.

ಚಹರೆ.

ಎತ್ತರ ಅಡಿಗಳು 5, ಎಣ್ಣೆಗೆಂಪು ವರ್ಣ; ಬಲ ಮೊಳಕೈಮೇಲೆ 2 ಮೈಲ ಕಲೆಗಳು ಇವೆ. ಎಡಪಕ್ಕೆ ಮೇಲೆ 9 ಮೈಲ ಕಲೆಗಳು ಇವೆ. ಮುಖದಮೇಲೆಲ್ಲಾ ಮೈಲ ಕಲೆ ಬಹಳ ಇವೆ. ಕೋಲು ಮುಖ, ಎಡಗಾಲಿನ ಹಡ್ಡಿನ ಮೇಲುಗಡೆ ಬಂದು ಕುರುವಿನ ಕಲೆ ಇದೆ.

ಎಂ. ನಾರಾಯಣರಾವ್, ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1902—1903ನೇ ಇಸವಿ ಮಿ॥ ಅರ್ಜಿ ನಂಬರ್ 101.

ಮೃತಪಟ್ಟ ಹೊನ್ನಾಳಿ ತಾಲ್ಲೂಕು ನ್ಯಾಮತಿಯಲ್ಲಿರುವ ಕಂಚುಗಾರ್ನಹಳ್ಳಿ ಬಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು, ನ್ಯಾಮತಿವಾಶೀ ಕಂಚುಗಾರನಹಳ್ಳಿ ಶಾಂತವೀರಪ್ಪ ಬಿ॥ ಬಸಪ್ಪನವರು ಮೃತಪಟ್ಟ ಸದರೀ ಕಂಚುಗಾರನಹಳ್ಳಿ ಬಸಪ್ಪನವರಿಗೆ ಖಾಸ ಮಗನು ಆಗಬೇಕೆಂಬ ಹಕ್ಕು ದಾರಿ ಮೇಲೆ ನ್ಯಾಮತಿ ಸ್ಥಳದ ಕಂಚುಗಾರನಹಳ್ಳಿ ಶ್ಯಾಂತವೀರಪ್ಪನವರು, ನ್ಯಾಮತಿ ವಾಸಸ್ಥರಾಗಿ ಮೃತಪಟ್ಟ ಡಿಟೋ ಬಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ (1,540 3—10) ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಕಂಚಗಾರನಹಳ್ಳಿ ಶಾಂತವೀರಪ್ಪ ಬಿ॥ ಬಸಪ್ಪನವರ ಅರ್ಜಿಯನ್ನು ಸ್ಯ 1903ನೇ ಇಸವಿ ಜನವರಿ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇದೆ.

ಸ್ಯ 1902ನೇ ಇಸವಿ ಡಿಸೆಂಬರು ತಿಂಗಳು 28ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಯ್ಯಂಗಾರ್,
ಶಿರಸ್ತೆದಾರ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 359.

ಅರ್ಜೀದಾರ್ರು ಬೆಂಗಳೂರು ಚಿಕ್ಕಪ್ಯಾಟೆಲಿರುವ ದೊಡ್ಡ ಭೂಗಾಸಾ ಹೆಂಡತಿ ಭವಾನಿ ಬಾಯಿ, ಮೈನರಾದ ಹೊನ್ನಪ್ಪ, 2ನೇ ಕೃಷ್ಣಪ್ಪ, 3ನೇ ಭೂಗಾಸಾ, ಬೆಂಗಳೂರು ಚಿಕ್ಕಪ್ಯಾಟೆ ಸ್ಥಳದ ಮೃತಪಟ್ಟ ದೊಡ್ಡ ಭೂಗಾಸಾಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೇ ಹೊನ್ನಪ್ಪ, 2ನೇ ಕೃಷ್ಣಪ್ಪ, 3ನೇ ಭೂಗಾಸಾ ಇವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಚಿಕ್ಕಪ್ಯಾಟೆ ಸ್ಥಳದ ಭವಾನಿ ಬಾಯಿಯವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಯ 1903ನೇ ಇಸವಿ ಜನವರಿ ತಾರೀಖು 23ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ. ಆ ತಾರೀಖು ದಿವಿ 11 ಘಂಟೆಗೆ ತಕರಾರುದಾರ್ರು ಹಾಜರಾಗಿ ತಿಳಿಯಪಡಿಸ ತಕ್ಕದ್ದಿದೆ.

ಸ್ಯ 1902ನೇ ಇಸವಿ ಡಿಸೆಂಬರು ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ಸಿಂಗ್ಯಾಚಾರ್, ಸಬ್ ಜಡ್ಜ್.